# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ**766/2021**

## ಚಾಸಾ-**13**/ಪ್ರಾಸಾ-**1**

**ಪ್ರಮಾಣ ವಚನ ಭೋಧಿಸಲಾಯಿತು.** ದಿನಾಂಕಃ30.07.2024.

ಹೆಸರು : ಕೆ. ನಟರಾಜ ತಂದೆ ಕೃಷ್ಣ ಮೂರ್ತಿ
ವಯಸ್ಸು : 50 ವರ್ಷ
ಉದ್ಯೋಗ : ಬಿಳಿಚೋಡು ಪೋಲಿಸ್ ಠಾಣೆ
ವಿಳಾಸ : ಬಿಳಿಚೋಡು

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ದಿಃ28.09.2019 ರಿಂದ ಇಲ್ಲಿಯವರೆಗೆ ಬಿಳಿಚೋಡು ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ14.01.2021 ರಂದು ಸಂಜೆ 06ಃ15 ಗಂಟೆಗೆ ನಾನು ಠಾಣೆ ಪ್ರಭಾರದಲ್ಲಿ ಇದ್ದಾಗ, ಚಾಸಾ-1 ಇವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. ಸದರಿ ಪಿರ್ಯಾದಿಯ ಆಧಾರದ ಮೇಲೆ ನಮ್ಮ ಠಾಣಾ ಗುನ್ನೆ ನಂಃ03/2021 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಪಿರ್ಯಾದಿ **ನಿ.ಪಿ.1** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ1(ಎ)** ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ನೋಡಿ ಗುರುತಿಸಿದ ಪ್ರಥಮ ವರ್ತಮಾನ ವರದಿಯನ್ನು **ನಿ.ಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. ದಿಃ15.01.2021 ರಂದು ಗುನ್ನಾ ಸ್ಥಳಕ್ಕೆ ಬೇಟಿ ಕೊಟ್ಟು ಪಂಚರಾದ ಚಾಸಾ-2 ಮತ್ತು 3 ಇವರ ಸಮಕ್ಷಮ ಬೆಳಿಗ್ಗೆ 11ಃ00 ಗಂಟೆಯಿಂದ 12ಃ00 ಗಂಟೆಯವರಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ರೀತಿ ಸಾಕ್ಷಿ ನೋಡಿ ಗುರುತಿಸಿದ ಸ್ಥಳ ಪಂಚನಾಮೆಯನ್ನು **ನಿ.ಪಿ.3** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿ.ಪಿ.3(ಎ)** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ಗುನ್ನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿ ಪೋಟೋಗಳನ್ನು ಪಡೆದಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಕಚ್ಚಾ ನಕಾಶೆಯನ್ನು **ನಿ.ಪಿ.4** ಎಂದು,

ಸಾಕ್ಷಿಯ ಸಹಿಯನ್ನು **ನಿ.ಪಿ.4(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಫೋಟೋಗಳನ್ನು ಕ್ರಮವಾಗಿ **ನಿ.ಪಿ.5 ರಿಂದ 7** ಎಂದು ಗುರುತಿಸಲಾಗಿರುತ್ತದೆ. ಅದೇ ದಿನದಂದು ಸಾಕ್ಷಿದಾರರಾದ ಚಾಸಾ-5 ಮತ್ತು 8 ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ12 ರವರ 65ಬಿ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ 65ಬಿ ಪ್ರಮಾಣ ಪತ್ರವನ್ನು **ನಿ.ಪಿ.8** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.8(ಎ)** ಎಂದು ಗುರುತಿಸಲಾಯಿತು. ನಂತರ ಆರೋಪಿತರಿಗೆ ದಿಃ20.01.2021 ರಂದು 41ಎ ನೋಟೀಸು ಜಾರಿ ಮಾಡಿರುತ್ತೇನೆ. ನಂತರ ದಿಃ22.01.2021 ರಂದು ಚಾಸಾ4, 6, 7, 9, 10 ಮತ್ತು 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ12.06.2021 ರಂದು ಘನ ಜಿಲ್ಲಾ ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಬಂದು ಹಾಜರಾಗಿರುತ್ತಾರೆ. ಸದರಿಯವರಿಗೆ ದಸ್ತಗಿರಿ ಕ್ರಮ ಜರುಗಿಸಿ ನಂತರ ಘನ ನ್ಯಾಯಾಲಯದ ಆದೇಶದಂತೆ ಜಾಮೀನು ಕ್ರಮ ಜರುಗಿಸಿರುತ್ತೇನೆ. ನಂತರ ಗುನ್ಹಾ ಸ್ಥಳದ ಜಮೀನಿನ ದಾಖಲಾತಿಗಳನ್ನು ಮತ್ತು ಹಿರಿಯ ಸಿವಿಲ್ ನ್ಯಾಯಾಲಯ, ಜಗಳೂರು ರಲ್ಲಿ ಒಎಸ್ ನಂಃ03/2021 ಆದೇಶ ಪ್ರತಿ, ವಾದ ಪತ್ರ, ಮಧ್ಯಂತರ ಅರ್ಜಿಯ ಪ್ರತಿಗಳನ್ನು ಚಾಸಾ1 ರವರ ಕಡೆಯಿಂದ ಪಡೆದುಕೊಂಡಿರುತ್ತೇನೆ. ನಂತರ ದಿಃ14.06.2021 ರಂದು ತನಿಖೆ ಮುಕ್ತಾಯಗೊಂಡಿದ್ದರಿಂದ ಮತ್ತು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷಿ ಪುರಾವೆ ಸಂಗ್ರಹವಾಗಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ- ಆರೋಪಿ ನಂಃ1 ಮತ್ತು 3 ಪರ ಎನ್ ಕೆ., ವಕೀಲರಿಂದಃ-**

ಚಾಸಾ1 ರವರು ನನ್ನ ಬಳಿ ದೂರು ನೀಡಿದಾಗ ನಾನು ಈ ಪ್ರಕರಣದ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ನಾನು ಗುನ್ಹಾ ಸ್ಥಳದ ಜಮೀನು ಯಾರಿಗೆ ಸಂಬಂದಪಟ್ಟಿದ್ದು ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ಗುನ್ಹಾ ಸ್ಥಳಕ್ಕೆ ಬೇಟಿ ಮಾಡಿದಾಗ ಸದರಿ ಜಮೀನಿನ ವಾರಸುದಾರರು ಯಾರು ಎಂದು ಸ್ಥಳೀಯರನ್ನು ನಾನು ವಿಚಾರಿಸಿರುತ್ತೇನೆ. ನಾನು ಪಿರ್ಯಾದಿ ನೀಡಿದ ದಾಖಲೆಗಳ ಆದಾರದ ಮೇಲೆ ಪ್ರಕರಣ ದಾಖಲಿಸಿರುತ್ತೇನೆ. ಚಾಸಾ2 ಮತ್ತು 3 ರವರು ನಾವು ಗುನ್ಹಾ ಸ್ಥಳಕ್ಕೆ ಬೇಟಿ ಕೊಟ್ಟಾಗ ಪಕ್ಕದ ಹೊಲದಲ್ಲಿ ಕೆಲಸ ಮಾಡುತ್ತಿದ್ದರು ಅವರನ್ನು

ಕರೆಯಿಸಿ ಪಂಚರಾಗಲು ಕೇಳಿಕೊಂಡಿರುತ್ತೇನೆ. ನಿ.ಪಿ.5 ರಿಂದ 7 ಫೋಟೋಗಳಲ್ಲಿ ಕಾಣುವ ಚಾಸಾ2 ಮತ್ತು 3 ಪಂಚರು ಸ್ಥಳಿಯರಲ್ಲ ಅವರು ಮೂಲತಃ ದಾವಣಗೆರೆಯ ಎಸ್‌ಓಜಿ ಕಾಲೋನಿಯ ಚಾಸಾ1 ರವರ ಮನೆಯ ಪಕ್ಕದವರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು ನಂತರ ನನಗೆ ಅವರು ದಾವಣಗೆರೆ ಎಸ್‌ಓಜಿ ಕಾಲೋನಿಯವರು ಎಂದು ತಿಳಿಸಿದರು ಎಂದು ಹೇಳುತ್ತಾರೆ. ಆರೋಪಿಗಳು ಮತ್ತು ಚಾಸಾ1 ರವರ ನಡುವೆ ಸಿವಿಲ್ ದಾವೆ ನಂಃ3/2021 ಚಾಲ್ತಿಯಿದ್ದು, ಅದರ ಪ್ರಕಾರ ಜಮೀನಿನ ವಾರಸುದಾರರು ಆರೋಪಿಗಳೇ ಆಗಿರುತ್ತಾರೆ ಎಂದರೆ ಸರಿಯಲ್ಲ. ಆದುದರಿಂದ ಅವರು ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಪರಿಶೀಲಿಸಿದ ದಾಖಲೆಗಳ ಪ್ರಕಾರ ಚಾಸಾ1 ರವರು ಮಾಲೀಕರು ಎಂದು ಇರುತ್ತದೆ ಎಂದು ಹೇಳುತ್ತಾರೆ. ನಾನು ಬರೀ ದಾಖಲಾತಿಗಳ ಆದಾರದ ಮೇಲೆ ದೋಷರೋಪಣೆ ಸಲ್ಲಿಸಿದ್ದು, ಸಾಕ್ಷಿಗಳ ವಿಚಾರಣೆ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಸರ್ವೆ ನಂಃ6/3 ಮೂಲ ವಾರಸುದಾರರು ದಿಬ್ಬದಹಳ್ಳಿ ಹುಸೇನ್ ಸಾಬ್ ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಜಮೀನಿನ ಯಾರು ವಾರಸುದಾರರು ಎಂದು ನಾವು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಾಸಾ4 ರಿಂದ 11 ರವರು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಾವು ಠಾಣೆಯಲ್ಲಿ ರಚಿಸಿದ್ದು, ಗುನ್ನಾ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಸಿವಿಲ್ ದಾವೆ ನಂಃ3/2021 ದಾಖಲೆಗಳು ನಾನು ಪರಿಶೀಲಿಸಿ ಆರೋಪಿಗಳ ವಿರುದ್ಧ ಪ್ರಕರಣ ಸಾಬೀತು ಆಗದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ.ದಂ., ಜಗಳೂರು